# ಸಂಸತ್‌ನಲ್ಲಿ ಸಂವಾದವಿರಲಿ, ವಾದಗಳಲ್ಲ



ಕೆವಾಡಿಯಾದಲ್ಲಿ ನಡೆಯುತ್ತಿರುವ ವಿಧಾನಸಭೆಗಳ ಸಭಾಧ್ಯಕ್ಷರ 80ನೇ ಅಖಿಲ ಭಾರತ ಸಮಾವೇಶವನ್ನು ರಾಷ್ಟ್ರಪತಿ ಉದ್ಘಾಟಿಸಿದರು.



ಸಂವಿಧಾನದ ಆಶಯಗಳಿಗೆ ತಕ್ಕಂತೆ ಜನಪ್ರತಿನಿಧಿಗಳು ನಡೆದುಕೊಳ್ಳಬೇಕು. ಸಂವಿಧಾನ ನೀಡಿರುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯನಿರ್ವಹಿಸಬೇಕು. ದೇಶದ ಜನರ ಹಕ್ಕು ಬಾಧ್ಯತೆ ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

-ಓಂ ಬಿರ್ಲಾ, ಲೋಕಸಭಾ ಸ್ಪೀಕರ್

**ಕೆವಾಡಿಯಾ:** ಸಂಸತ್‌ನಲ್ಲಿ ಸಂವಾದ ಎಲ್ಲ ವಿವಾದಗಳ ಇತ್ಯರ್ಥಕ್ಕೆ ಬಳಕೆಯಾಗಬೇಕೇ ಹೊರತು, ವಿವಾದಕ್ಕೆ ಎಡೆಮಾಡಿಕೊಡಬಾರದು ಎಂದು ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಹೇಳಿದ್ದಾರೆ.

ಗುಜರಾತ್‌ನ ಕೆವಾಡಿಯಾದಲ್ಲಿ ನಡೆಯುತ್ತಿರುವ ವಿಧಾನಸಭೆಗಳ ಸಭಾಧ್ಯಕ್ಷರ 80ನೇ ಅಖಿಲ ಭಾರತ ಸಮಾವೇಶವನ್ನು ಉದ್ಘಾಟಿಸಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಮಾತನಾಡಿದರು. ಅಧಿವೇಶನದ ಸಂವಾದಗಳನ್ನು ಜನಪ್ರತಿನಿಧಿಗಳು ಸಮಾಜದ ಒಳಿತಿಗಾಗಿ ಹಾಗೂ ಜನ ಸಾಮಾನ್ಯರ ಸಂಕಷ್ಟ ಪರಿಹಾರಕ್ಕಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ಸಾಮಾಜಿಕ ಮಾಧ್ಯಮಗಳ ಈ ಯುಗದಲ್ಲಿ ಜನಪ್ರತಿನಿಧಿಗಳ ನಡೆ ನುಡಿ ಜನಸಾಮಾನ್ಯರನ್ನು ಶೀಘ್ರವಾಗಿ ತಲುಪುತ್ತಿದೆ. ಈ ಆಧುನಿಕ ಯುಗದಲ್ಲಿ ಶಾಸಕರು ಮತ್ತು ಜನರನ್ನು ಪ್ರತಿನಿಧಿಸುವ ಎಲ್ಲ ಸದಸ್ಯರು ತಮ್ಮ ನಡೆ ನುಡಿಯನ್ನು ಶಿಷ್ಟಾಚಾರದೊಂದಿಗೆ ನಿರ್ವಹಿಸುವ ಜವಾಬ್ದಾರಿ ಹೆಚ್ಚಿದೆ ಎಂದು ಹೇಳಿದರು. ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಮಾತನಾಡಿ, ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳ ನಡುವೆ ಸಮನ್ವಯತೆ ಅತ್ಯಗತ್ಯವಾಗಿದ್ದು, ಪರಮೋಚ್ಛವಾಗಿರುವ ಸಂವಿಧಾನವನ್ನು ಪ್ರತಿಯೊಬ್ಬರು ಗೌರವಿಸಿ. ಕೆಲವೊಮ್ಮೆ ಶಾಸಕಾಂಗವೂ ತನ್ನ ಗಡಿ ದಾಟಿದ್ದು ಇದು ಒಳ್ಳೆಯದಲ್ಲ. ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಿ ಆಯ್ಕೆಯನ್ನು 1975ರಲ್ಲಿ ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿ ಮೀರಿ 39ನೇ ಸಂವಿಧಾನದ ತಿದ್ದುಪಡಿ ಮಾಡಿದ್ದು ಅದಕ್ಕೆ ಒಂದು ಉದಾಹರಣೆ ಎಂದರು.

## ಇಂದು ಪ್ರಧಾನಿ ಭಾಗಿ

ಇಂದಿನ ಸಮಾರೋಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದು, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಸಾಮರಸ್ಯ ಪ್ರಜಾಪ್ರಭುತ್ವದ ಪ್ರಮುಖ ಕೀಲಿ ಕೈ ಎಂಬುದು ಈ ಸಮಾವೇಶದ ಘೋಷವಾಕ್ಯವಾಗಿದೆ.